**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.**

ಸಿ.ಸಿ. ನಂ.400/2022

ಡಿ.ಡಬ್ಲ್ಯೂಃ 1

ಸಾಕ್ಷಿದಾರರ ಹೆಸರು : ನಾಗೇಶ ರಾಮಾ ತಾಂಡೇಲ

ತಂದೆಯ ಹೆಸರು : ರಾಮಾ ತಾಂಡೇಲ

ವಯಸ್ಸು : 71 ವರ್ಷ

ಉದ್ಯೋಗ : ಮೀನುಗಾರಿಕೆ

ವಾಸ : ಅಂಕೋಲಾ

ದಿನಾಂಕಃ 21-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ಮುಖ್ಯ ವಿಚಾರಣೆಃ ಆರೋಪಿ ಶ್ರೀ ಎಸ್ ಓ . ಎನ್ ವಕೀಲರಿಂದಃ**

1. ನಾನು ಸುಪ್ರಭಾತ ಕ್ರೆಡಿಟ್ ಸೌಹಾರ್ದ ಸಂಸ್ಥೆಗೆ ಸಾಲ ಕೇಳಲು ಹೋಗಿದ್ದೆ . ನನಗೆ ರೂ 10 ಲಕ್ಷ ಸಾಲವನ್ನು ಕೊಡುತ್ತೇಃನೆ ಎಂದು ಹೇಳಿದ್ದರು . ಅವರು ಅದರಲ್ಲಿ ರೂ 5 ಲಕ್ಷ ಎಪ ಡಿ ಇಡುತ್ತೇನೆ ಎಂದು ಹೇಳಿ ಮತ್ತು ಆ 5 ಲಕ್ಷ ಹಣವನ್ನು ಎಪಡಿ ಗೆ ಪಡೆದು ಕೊಳ್ಳಲಾಗಿದೆ ಎಂದು ಒಟ್ಟು ರೂ 15 ಲಕ್ಷ ಸಾಲ ವನ್ನು ಮಾಡಿ ನನಗೆ ನಗದಿನ ರೂಪದಲ್ಲಿ ರೂ 10 ಲಕ್ಷ ಸಾಲ ಕೊಟ್ಟಿರುತ್ತಾರೆ . ಅದರಲ್ಲಿಯೂ ರೂ 55 ಸಾವಿರ ಹಣವನ್ನು ಯಾವುದಕ್ಕೊ ಬೇಕು ಎಂದು ತೆಗೆದು ಕೊಂಡಿರುತ್ತಾರೆ ಅದರ ಬಗ್ಗೆ ನನಗೆ ಗೊತ್ತಿಲ್ಲ . ಅದರಲ್ಲಿ ನನಗೆ ಸಿಕ್ಕಿದ್ದು ರೂ 9,45,000 . ನಾನು ಮೀನುಗಾರಿಕೆ ಮಾಡಿ ಸದ್ರಿ ಪಿರ್ಯಾದಿದಾರರ ಸಂಸ್ಥೆ.ಗೆ ರೂ 9 ಲಕ್ಷ ಹಣವನ್ನು ತುಂಬಿರುತ್ತೇನೆ . ಸದ್ರಿ ನನ್ನ ಬೋಟನ್ನು ಅವರೆ ಮಾರಿಕೊಂಡು ಅದರ ರಶೀದಿಯನ್ನು ಕೂಡ ನನಗೆ ಕೊಟ್ಟಿಲ್ಲ . ಬೋಟಿನ ಆರ್ ಸಿ ಯನ್ನು ಸಹ ಮಾರಿರುತ್ತಾರೆ ಅದು ಎಷ್ಟು ಹಣಕ್ಕೆ ಮಾರಿರುತ್ತಾರೆ ಎಂದು ನನಗೆ ಹೇಳಿಲ್ಲ ಅದನ್ನು ಮಾರಾಟ ಮಾಡುವಾಗ ನನ್ನ ಒಪ್ಪಿಗೆ ಪಡೆದುಕೊಂಡಿಲ್ಲ . ನಾನು ಸಂಪೂರ್ಣವಾಗಿ ಸಾಲದ ಹಣ ಮರು ಪಾವತಿ

ಮಾಡಿರುತ್ತೇನೆ ಅವರು ಅದರ ಬಗ್ಗೆ ದಾಖಲಾತಿ ಕೊಡುವುದಿಲ್ಲ .ನ್ಯಾಯಾಲಯದಲ್ಲಿ ಸುಮ್ಮನೆ ಕೇಸ್ ಹಾಕುತ್ತಾರೆ. ನಾನು ನ್ಯಾಯಾಲಯದಲ್ಲಿಯೂ ಸಹ ನ್ಯಾಯಾಲಯದ ಸಮಕ್ಷಮ ದಲ್ಲಿ ಪಿರ್ಯಾದಿದಾರರ ಸಂಸ್ಥೆ.ಗೆ ಹಣವನ್ನು ಕಟ್ಟಿರುತ್ತೇನೆ . ಅದರ ಬಗ್ಗೆ ಮರು ಪಾವತಿ ದಾಖಲಾತಿಗಳನ್ನು ಕೊಡುವುದಿಲ್ಲ .ನನ್ನ ಮಗನ್ನು ಕೂಡ ತೀರಿ ಕೊಂಡಿರುತ್ತೇನೆ ನಾನು ಸದ್ರಿ ಪಿರ್ಯಾದಿದಾರ ಸಂಸ್ಥೆ ಯಲ್ಲಿ ಇನ್ಸೂರನ್ಸ ಕೂಡ ಮಾಡಿರುತ್ತೇನೆ ಆದನ್ನು ಅವರೆ ಮಾಡಿಸಿದ್ದು . ಅದರ ಹಣವು ಕೂಡ ಎಷ್ಟು ಆಗಿದೆ ಎಂದು ನನಗೆ ಗೊತ್ತಿಲ್ಲ . ಅದರೊಂಗೆ ನಾನು ನನ್ನ ಮಗನ ಹೆಸನಲ್ಲಿರುವ 3 ಇನ್ಸೂರನ್ಸ ಬಾಂಡಗಳನ್ನು ಸಹ ಕೊಟ್ಟಿರುತ್ತೇನೆ ಅದರ ಬಗ್ಗೆ ಅವರು ಹೇಳುವುದಿಲ್ಲ . ಸದ್ರಿ ಪ್ರಕರಣವನ್ನು ವಿಚಾರಣೆ ಮಾಡಿ ಸರಿಯಾದ ನ್ಯಾಯ ದೊರಕಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ .

( ಈ ಹಂತದಲ್ಲಿ ಪಿರ್ಯಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.